ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

(ಸಾಕ್ಷಿಗೆ ದಿನಾಂಕಃ 09-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿ 2 ರವರಿಂದ ಸೀಲ್ ನ್ನು ಅಮಾನತ್ತುಪಡಿಸಿಕೊಂಡಿರುವುದಾಗಿ ಸಾಕ್ಷಿ ಸೀಲ್ ನ್ನು ನೋಡಿ ಗುರುತಿಸಿರುವುದರಿಂದ, ಸದರಿ ಸೀಲ್ ನ್ನು ಮೂ ಮಾ 1 ಎಂದು ಗುರುತಿಸಲಾಯಿತು ಮತ್ತು ಸದರಿ ಸೀಲ್ ನ್ನು ಅಮಾನತ್ತುಪಡಿಸಿದ ಮಹಜರ್ ನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5 ಬಿ ಎಂದು ಗುರುತಿಸಲಾಯಿತು.

ದಿ 16-03-2015 ರಂದು ಆರೋಪಿ 3 ರವರಿಂದ ಬೆಂಗಳೂರು ರೈಲ್ವೆ ಕಂಟೋನಮೆಂಟ್ ನಲ್ಲಿ 500 ರೂ ಮುಖಬೆಲೆಯ 140 ನೋಟುಗಳನ್ನು ಚಾಸಾ-4,5 ರವರ ಸಮಕ್ಷಮ ನಿಪಿ-3 ರಂತೆ ಮಧ್ಯಾಹ್ನ 1.00-2.00 ಗಂಟೆಯವರೆಗೂ ಅಮಾನತ್ತು ಪಂಚನಾಮೆ ಜರುಗಿಸಿ, ಅಮಾನತ್ತುಪಡಿಸಿಕೊಂಡಿದ್ದೇನೆ. ಈಗ ನ್ಯಾಯಾಲಯದ ಮುಂದೆ ಇರುವ ಸದರಿ ನೋಟುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯು ನಾನು ಅಮಾನತ್ತುಪಡಿಸಿದ ಹಣವಾಗಿದೆ ಎಂದು ಹೇಳಿದ ಮೇರೆಗೆ ಹಣವನ್ನು ಒಟ್ಟಾಗಿ ಮೂಮಾ 2 ಎಂದು ಗುರುತಿಸಲಾಯಿತು. ಸದರಿ ನಿಪಿ-3 ರಲ್ಲಿರುವ ಸಾಕ್ಷಿಯ ಸಹಿ ನಿಪಿ-3 ಬಿ ಎಂದು ಗುರುತಿಸಲಾಯಿತು.

ದಿ 16-03-2015 ರಂದು ಚಾಸಾ-4, 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ 22-03-2015 ರವರ ಚಾಸಾ-6, 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ 31-03-2015 ರಂದು ಚಾಸಾ-1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ 11-04-2015 ರಂದು ಚಾಸಾ-8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ 14-06-2015 ರಂದು ಚಾಸಾ-9, 10, 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ 08-03-2015 ರಂದು ಚಾಸಾ-13 ರವರು ಆರೋಪಿ 2, 3 ರವರನ್ನು ಠಾಣೆಗೆ ತಂದು ಹಾಜರುಪಡಿಸಿದ ಬಗ್ಗೆ ವರದಿ ಪಡೆದುಕೊಂಡಿರುತ್ತೇನೆ. ಅದೇದಿನ ಆರೋಪಿ 1 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದರಂತೆ ದಿ 21-03-2015 ರಂದು ಆರೋಪಿ 2 ರವರ ಹೇಳಿಕೆ ಮತ್ತು ದಿ 15-03-2015 ರಂದು ಆರೋಪಿ 3 ರವರ ಹೇಳಿಕೆ ಮತ್ತು ದಿ 12-05-2015 ರಂದು ಆರೋಪಿ 4 ರವರ ಸ್ವಇಚ್ಛಾ ಹೇಳಿಕೆ ಹಾಗೂ ದಿ 07-03-2015 ರಂದು ಚಾಸಾ-3 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಚಾಸಾ-15 ರವರಿಗೆ ಕಡತವನ್ನು ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ. ಹೆಚ್ ವಿಬಿ ವಕೀಲರಿಂದಃ–**

ನಿಪಿ-7 ರ ಪ್ರ.ವ.ವರದಿಯಲ್ಲಿ ದಿನಾಂಕವನ್ನು ತಿದ್ದಲಾಗಿದೆ ಎಂದರೆ ಸರಿಯಲ್ಲ. ಆರೋಪಿ 1 ರವರು ಮೈಸೂರಿನಲ್ಲಿ ತರಬೇತಿಗಾಗಿ ಸೇರಿದ್ದರು ಎಂಬ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ನಿಪಿ-2 ನ್ನು ಅಮಾನತ್ತುಪಡಿಸಿದ ಬಗ್ಗೆ ಮಹಜರ್ ಮಾಡಿಲ್ಲ. ಚಾಸಾ-2 ರವರು ಬೆಳಗ್ಗೆ 11.00 ರಿಂದ ರಾತ್ರಿ 9.00 ಗಂಟೆಯವರೆಗೂ ಮದ್ದೂರು ರೈಲ್ವೆ ಸ್ಟೇಷನ್ ನಲ್ಲಿ ಕರ್ತವ್ಯ ನಿರ್ವಹಿಸಿದ್ದರು ಎಂಬ ಬಗ್ಗೆ

ದಾಖಲಾತಿ ಹಾಜರುಪಡಿಸಿಲ್ಲ. ಇನ್ ಚಾರ್ಜ್ ಸ್ಟೇಷನ್ ಮಾಸ್ಟರ್ ಮಣಿ ಎಂಬುವವರ ಹೇಳಿಕೆ ಪಡೆದಿಲ್ಲ. ಆರೋಪಿ 3 ರವರಿಂದ ನಿಪಿ-3 ರಂತೆ ಮಹಜರ್ ಮಾಡಿ ಮೂಮಾ 2 ನ್ನು ಅಮಾನತ್ತುಪಡಿಸಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 2 ರವರಿಂದ ನಿಪಿ-5 ರಂತೆ ಮೂಮಾ 1 ನ್ನು ಅಮಾನತ್ತುಪಡಿಸಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಹಜರ್ ನ್ನು ಸಾಕ್ಷಿದಾರರ ಸಮಕ್ಷಮ ಮಾಡಿರದೇ ನಿಪಿ-3, 5 ಕ್ಕೆ ಠಾಣೆಯಲ್ಲಿ ಸಹಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಮತ್ತು ಸದರಿಯವರು ಯಾರು ಕೂಡ ಹೇಳಿಕೆ ನೀಡಿಲ್ಲದಿದ್ದರೂ ಪ್ರಕರಣಕ್ಕಾಗಿ ವಿವಿಧ ದಿನಾಂಕಗಳಲ್ಲಿ ಹೇಳಿಕೆ ನೀಡಿರುವುದಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಸ್ವಇಚ್ಛಾ ಹೇಳಿಕೆ ನೀಡಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಲಾಖೆಯ ಅಂಕಿ ಅಂಶಕ್ಕಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿ , ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡು ಮುಂದುವರೆದ ಪಾಟೀ ಸವಾಲುಃ ಆರೋಪಿ 2 ರವರ ಪರ ಮಾನ್ಯ ಶ್ರೀ. ವಕೀಲರಿಂದಃ–**

ಮೂಮಾ 1 ನ್ನು ಆರೋಪಿ 2 ರವರಿಂದ ಅಮಾನತ್ತುಪಡಿಸಿಕೊಂಡಿರುವುದಾಗಿ ಸುಳ್ಳು ನುಡಿಯುತ್ತಿದ್ದು, ಪ್ರಕರಣಕ್ಕಾಗಿ ನಾವೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ 3 ರವರಿಂದ ಮೂಮಾ 2 ನ್ನು ಅಮಾನತ್ತುಪಡಿಸಿದ ಬಗ್ಗೆ ತಜ್ಞರ ಅಭಿಪ್ರಾಯ ಕೋರಲು ಕಳುಹಿಸಿಲ್ಲ. ಆರೋಪಿ 2 ರವರು ಪ್ರಕರಣದಲ್ಲಿ ಯಾವುದೇ ಅಪರಾಧ ಮಾಡಿಲ್ಲದಿದ್ದರೂ ಸುಳ್ಳು ಆರೋಪ ಮಾಡಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ 4 ರವರ ಪರ ವಕೀಲರು ಈ ಮೇಲ್ಕಂಡ ಎಲ್ಲಾ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು